ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 22-10-2016

# ಪತ್ರಿಕಾ ಆಮಂತ್ರಣ

1. ವ್ಯಂಗ್ಯ ಚಿತ್ರಗಾರರ ಶಿಬಿರದ ಸಮಾರೋಪ:
   ಕಲಾವಿದರಿಗೆ ಅಭಿನಂದನೆ: ಎಸ್. ಸುರೇಶ್‌ಕುಮಾರ್, ಮಾಜಿ ಸಚಿವರು ಹಾಗೂ ಶಾಸಕರು.
   ಅನಿಸಿಕೆ: ವಿ.ಜಿ. ನರೇಂದ್ರ, ಹಿರಿಯ ವ್ಯಂಗ್ಯಚಿತ್ರಕಾರರು.
   ದಿನಾಂಕ: 23-10-2016 ಭಾನುವಾರ, ಸಂಜೆ 4-00 ಗಂಟೆಗೆ
   ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಆರ್ಟ್‌ಕಾಂಪ್ಲೆಕ್ಸ್, ಕುಮಾರ ಕೃಪಾರಸ್ತೆ, ಬೆಂಗಳೂರು – 560 001.

## ಮಾಧ್ಯಮ ಪ್ರತಿನಿಧಿಗಳ ಗಮನಕ್ಕೆ

ನವೆಂಬರ್ 21 ರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನ ವರದಿಗಾಗಿ ಬೆಂಗಳೂರಿನಿಂದ ತೆರಳುವ ಮಾಧ್ಯಮ ಪ್ರತಿನಿಧಿಗಳಿಗೆ ಪಾಸ್ ಹಾಗೂ ಇತರೆ ವ್ಯವಸ್ಥೆಗಾಗಿ ವಿವಿಧ ಮಾಧ್ಯಮ ಸಂಸ್ಥೆಗಳಿಗೆ ಸಂಖ್ಯೆ ನಿಗದಿಪಡಿಸಲಾಗಿದೆ. ಅದರನ್ವಯ ಆಯಾ ಮಾಧ್ಯಮ ಕಛೇರಿಯಿಂದ ಮಾಧ್ಯಮ ಪ್ರತಿನಿಧಿಗಳ ವಿವರವನ್ನು ಈ ಕೆಳಕಂಡ ನಮೂನೆಯಲ್ಲಿ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಅಕ್ಟೋಬರ್ 27 ರೊಳಗೆ ಸಲ್ಲಿಸಬೇಕು.

1) ಮುದ್ರಣ ಮಾಧ್ಯಮ: ರಾಜ್ಯ ಮತ್ತು ರಾಷ್ಟ್ರಮಟ್ಟದ ದಿನಪತ್ರಿಕೆಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 1 ಛಾಯಾಗ್ರಾಹಕರಿಗೆ ಅವಕಾಶ.

2) ವಿದ್ಯುನ್ಮಾನ ಮಾಧ್ಯಮ: ರಾಜ್ಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ ಮಾನ್ಯತಾ ಪತ್ರ ಹೊಂದಿರುವ 4 ವರದಿಗಾರರು ಮತ್ತು 4 ಕ್ಯಾಮರಾಮನ್‌ಗಳಿಗೆ ಅವಕಾಶ, ರಾಷ್ಟ್ರೀಯ ಮಟ್ಟದ ಉಪಗ್ರಹ ಆಧಾರಿತ ನ್ಯೂಸ್ ಚಾನೆಲ್‌ಗಳಿಂದ 2 ವರದಿಗಾರರು ಮತ್ತು 2 ಕ್ಯಾಮರಾಮನ್‌ಗಳಿಗೆ ಅವಕಾಶ.

3) ಸುದ್ದಿ ಸಂಸ್ಥೆ: ಮಾನ್ಯತಾ ಪತ್ರ ಹೊಂದಿರುವ ಸುದ್ದಿ ಸಂಸ್ಥೆಯ ಇಬ್ಬರು ಪ್ರತಿನಿಧಿಗಳಿಗೆ ಅವಕಾಶ.

**4) ಅನ್ಯ ಭಾಷೆಯ ದಿನಪತ್ರಿಕೆಗಳು: ಅನ್ಯ ಭಾಷೆಯ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಬೆಂಗಳೂರಿನ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ಮಾನ್ಯತಾ ಪತ್ರ ಹೊಂದಿರುವ 2 ವರದಿಗಾರರಿಗೆ ಅವಕಾಶ.**

**ಸೂಚನೆ: ಬೆಳಗಾವಿ ಜಿಲ್ಲೆಯನ್ನು ಹೊರತು ಪಡಿಸಿ ಸಮೀಪದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಪ್ರತಿನಿಧಿಗಳನ್ನು ನಿಯೋಜಿಸುವುದಿದ್ದಲ್ಲಿ ನಿಗದಿತ ಕೋಟಾದಡಿಯಲ್ಲಿ ಅವರ ಹೆಸರನ್ನು ಈ ಪಟ್ಟಿಯಲ್ಲಿಯೇ ಸೇರಿಸಿ ಕಳುಹಿಸಬೇಕು.**

| ಕ್ರ.ಸ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ | ಈ ಮೇಲ್ ವಿಳಾಸ |
|---|---|---|---|---|
| 1 | | | | |

**ವಿಶೇಷ ಸೂಚನೆ: ಈಗಾಗಲೇ ವಿಧಾನ ಪರಿಷತ್ ಮತ್ತು ವಿಧಾನ ಸಭೆಗೆ ಪ್ರವೇಶ ಪತ್ರ ಪಡೆದಿರುವವರು ಬೆಳಗಾವಿ ವಿಧಾನಮಂಡಲ ಅಧಿವೇಶನಕ್ಕೂ, ಅದೇ ಪ್ರವೇಶ ಪತ್ರವನ್ನು ಬಳಸಬಹುದು. ಪ್ರವೇಶ ಪತ್ರ ಪಡೆಯದಿರುವ ಮಾಧ್ಯಮ ಪ್ರತಿನಿಧಿಗಳು ತಲಾ ಎರಡು ಭಾವಚಿತ್ರವನ್ನು ಸಲ್ಲಿಸಬೇಕು.**

## ಪತ್ರಿಕಾ ಪ್ರಕಟಣೆ

## ಅರ್ಜಿ ನಮೂನೆ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು (ಗ್ರೂಪ್ –ಎ) ಮತ್ತು ಲೆಕ್ಕಪರಿಶೋಧನಾಧಿಕಾರಿ (ಗ್ರೂಪ್–ಬಿ) ವೃಂದದ ಒಟ್ಟು 162 ಹುದ್ದೆಗಳ ಮುಖ್ಯ ಪರೀಕ್ಷೆಯನ್ನು ದಿನಾಂಕ: 07–1–2017 ರಿಂದ 11–01–2017 ರವರೆಗೆ ನಡೆಸಲು ಆಯೋಗವು ನಿರ್ಧರಿಸಿದ್ದು, ಸದರಿ ಪರೀಕ್ಷಾ ವೇಳಾಪಟ್ಟಿ, ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನದ ಕುರಿತು ಸೂಚನೆಗಳು ಹಾಗೂ ಮುಖ್ಯ ಪರೀಕ್ಷೆ ಅರ್ಜಿಯ ನಮೂನೆಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿಮಾಡಲು ಪ್ರಾರಂಭದ ದಿನಾಂಕ: 24–10–2016 ಆಗಿದ್ದು, ಕೊನೆಯ ದಿನಾಂಕ 16–11–2016 ಆಗಿರುತ್ತದೆ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕ 18–11–2016 ಅನ್ನು ನಿಗದಿಪಡಿಸಲಾಗಿದೆ. ಮುಖ್ಯ ಪರೀಕ್ಷೆಯ ಅರ್ಜಿಗೆ ಲಾಗ್‌ಇನ್ ಆಗಲು ಅವಶ್ಯವಿರುವ ವಿವರಗಳನ್ನು ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ನೀಡಲಾದ ನೋಂದಾಯಿತ ಇ–ಮೇಲ್ (ಮಿಂಚಂಚೆ) ಐ.ಡಿ.ಗೆ ಆಯೋಗವು ರವಾನಿಸುವುದು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ::ಜಿಪಿಆರ್.

## "ಹವಾಮಾನ ಬದಲಾವಣೆ ಅನುಗುಣವಾಗಿ ಕೃಷಿ ತಂತ್ರಜ್ಞಾನ ಸಹ ಬದಲಾಗಬೇಕು"

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಹವಾಮಾನ ವೈಪರೀತ್ಯಗಳ ನಡುವೆ ಕೃಷಿ ಉಳಿವಿಗಾಗಿ ರೈತರಿಗೆ ತಾಂತ್ರಿಕ ಮಾಹಿತಿಗಳನ್ನು ನೀಡುವುದರ ಮೂಲಕ ಸಹಾಯ ಮಾಡುವ ಅಗತ್ಯವಿದೆ ಎಂದು ರಾಜ್ಯ ಕೃಷಿ ಇಲಾಖೆ ನಿರ್ದೇಶಕ ಬಿ. ವೈ. ಶ್ರೀನಿವಾಸ್ ಅವರು ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆ ಇಂದು ಹಮ್ಮಿಕೊಂಡಿದ್ದ ವಿಶ್ವ ಆಹಾರ ದಿನಾಚರಣೆ – 2016 ಉದ್ಘಾಟಿಸಿ ಅವರು ಮಾತನಾಡಿದರು. ಹವಾಮಾನ ಬದಲಾವಣೆ ಎನ್ನುವುದು ಇಂದು ವಿಶ್ವವನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿ ಬರಗಾಲವಿದ್ದು ಇದಕ್ಕೆಲ್ಲ ಕಾರಣ ಹವಾಮಾನ ಬದಲಾವಣೆ, ಬರ ಮತ್ತು ಪ್ರವಾಹಗಳ ನಡುವೆ ರೈತ ಬಳಲಿದ್ದಾನೆ. ಹವಾಮಾನ ಚೆನ್ನಾಗಿದ್ದಲ್ಲಿ ಕೃಷಿ ಸಹ ಚೆನ್ನಾಗಿರುತ್ತದೆ. ಇದರಿಂದ ಆಹಾರ ಉತ್ಪಾದನೆ ಸಹ ಉತ್ತಮವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಹಲವು ಕಾರಣಗಳಿಂದ ಹವಾಮಾನದಲ್ಲಿ ಆಗುತ್ತಿರುವ ವೈಪರೀತ್ಯಗಳಿಂದ ಆಹಾರ ಉತ್ಪಾದನೆ ಕಡಿಮೆಯಾಗಿದೆ. ಇದಕ್ಕೆ ಪರಿಹಾರವಾಗಿ ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಕೃಷಿಯಲ್ಲಿ ಬದಲಾವಣೆಗಳನ್ನು ತರಬೇಕಾದ ಅಂಶಗಳ ಬಗ್ಗೆ ಕೃಷಿ ಇಲಾಖೆ ಹಾಗೂ ಕೃಷಿ ವಿ.ವಿ.ಗಳು ಒತ್ತು ನೀಡಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ "ಹವಾಮಾನ ಬದಲಾಗುತ್ತಿದೆ – ಆಹಾರ ಮತ್ತು ಕೃಷಿಯಲ್ಲಿಯು ಸಹ ಬದಲಾವಣೆ ಆಗಬೇಕಿದೆ" ಎಂಬ ವಿಷಯದ ಕುರಿತು ಚರ್ಚಿಸಲಾಯಿತು. ಬೆಂಗಳೂರಿನ ಐ.ಸಿ.ಎ.ಆರ್–ಎ.ಟಿ.ಎ.ಆರ್.ಐ. ನ ನಿರ್ದೇಶಕ ಡಾ. ಶ್ರೀನಾಥ್ ದೀಕ್ಷಿತ್

ಅವರು ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಬೇಸಾಯ ತಂತ್ರಗಳು: ಕೃಷಿ ವಿಜ್ಞಾನ ಕೇಂದ್ರಗಳ ಅನುಭವಗಳ ಕುರಿತಂತೆ ವಿಷಯ ಮಂಡಿಸಿದರು ಹಾಗೂ ಬೆಂಗಳೂರಿನ ಐ.ಸಿ.ಎ.ಆರ್–ಎನ್.ಐ.ಎ.ಎನ್ ಮತ್ತು ಪಿ. ನ ನಿರ್ದೇಶಕ ಡಾ. ರಾಘವೇಂದ್ರ ಭಟ್ಟ ಅವರು ಹವಾಮಾನ ಬದಲಾವಣೆ ಸನ್ನಿವೇಶದಲ್ಲಿ ಪಶುಸಂಗೋಪನೆ : ಪರಿಣಾಮಗಳು ಮತ್ತು ನಿವಾರಣಾ ತಂತ್ರಗಳ ಕುರಿತಂತೆ ವಿಷಯ ಮಂಡಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಉನ್ನತ ಅಧಿಕಾರಿಗಳು, ರೈತರು, ಕೃಷಿ ತಜ್ಞರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಎಸ್‍ಎಂ::ಜೆಡಿ:ಜಿಪಿಆರ್.

# ಕೆಎಸ್‍ಟಿಡಿಸಿ : ಪ್ರವಾಸ ಪ್ಯಾಕೇಜ್

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ (ಕರಾ.ಪ್ರ.ಅ.ನಿ), ಶ್ರೀಶೈಲ ಮಹಾನಂದಿ, ಹೈದರಾಬಾದ್ ಮತ್ತು ರಾಮೋಜಿ ಫಿಲ್ಮ್‍ಸಿಟಿ ಪ್ರವಾಸವನ್ನು ಆರಂಭಿಸಲಾಗಿದೆ. ಪ್ರತಿ ಬುಧವಾರ ಸಂಜೆ ಪ್ರಾರಂಭಿಸಿ ಸೋಮವಾರ ಬೆಳಿಗ್ಗೆ ವಾಪಸ್ಸು ಬರುವುದು. ಒಟ್ಟು ಆರು ದಿನಗಳ ಪ್ರವಾಸ. ಇದರ ದರ ರೂ 8,000/-.

ಇದಲ್ಲದೆ 5 ದಿನದ ಮಿನಿ ಸೌತ್ ಇಂಡಿಯಾ ಪ್ರವಾಸವನ್ನು ಪ್ರತಿ ಗುರುವಾರ ಸಂಜೆ ಪ್ರಾರಂಭಿಸಿ ಸೋಮವಾರ ಬೆಳಿಗ್ಗೆ ವಾಪಾಸ್ಸು ಬರುವುದು. ಇದರ ದರ ಒಬ್ಬರಿಗೆ ರೂ 5,400/-

ಈ ಮೇಲಿನ ಎರಡೂ ಪ್ರವಾಸಗಳಲ್ಲಿ ಬಸ್ ಹಾಗೂ ವಸತಿಗಳು ಹವಾನಿಯಂತ್ರಿತವಾಗಿರುತ್ತವೆ.

ಪ್ರವಾಸಗಳು ಪ್ರಾರಂಭಿಸುವ ಸ್ಥಳ ಬಾದಾಮಿ ಹೌಸ್, ಇದಲ್ಲದೆ ನಿಗಮದಿಂದ ಪ್ರವಾಸ ಹಾಗೂ ವಸತಿ ಕಾಯ್ದಿರಿಸುವ ವ್ಯವಸ್ಥೆಯೂ ಇದ್ದು ಹೆಚ್ಚಿನ ವಿವರವನ್ನು ನಮ್ಮ ನಿಗಮದ ವೆಬ್‍ಸೈಟ್ ಆದ www.karnatakaholidays.net ನಿಂದ ಪಡೆದುಕೊಳ್ಳಬಹುದು ಮತ್ತು ಮೊಬೈಲ್ ಆ್ಯಪ್ kstdcapp ಕೂಡ ಬಳಸಬಹುದು. ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು –(ಸಾ), ಕ.ರಾ.ಪ್ರ.ಅ.ನಿ.ನಿ., ಬಾದಾಮಿ ಹೌಸ್, ಮಹಾನಗರಪಾಲಿಕೆ ಎದುರು, ದೂರವಾಣಿ ಸಂಖ್ಯೆ : 43344334,22275869, 222755883, 8970650070, ಟೂರಿಸಂ ಹೌಸ್ ದೂರವಾಣಿ ಸಂಖ್ಯೆ 22352901,

902, 903 ರೈಲು ನಿಲ್ದಾಣ ; 22870068, ಕೆಂಪೇಗೌಡ ಬಸ್ ನಿಲ್ದಾಣ : 8970650075. ಇಲ್ಲಿ ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಪ್ರಕಟಣೆ ತಿಳಿಸಿದೆ.

ಎಸ್‌ಎಂ::ಜಿಪಿಆರ್.

# KSTDC TOURS

Bengaluru, October 22 (Karnataka Information)

Karnataka State Tourism Development Corporation (KSTDC) is conducting a six days tour to the Srisaila Mahanandi, Hyderabad and Ramoji Film City. On every Wednesday evening will start and Monday morning return. Fare is per head Rs. 8,000/- and Five Days Mini South India Tour on every Thursday evening will start and Monday morning return. Fare is Rs. 5,400/- in both the tour bus and accommodation AC. The all tours commences at Badami House. For more information please go through KSTDC website www.karnatakaholidays.net and use KSTDC Mobile App or please contact: Manager, Badami House, Opp: BBMP, City Corporation, Phone No.s 43344334, 22275869, 22275883, 8970650070, Tourism House Phone No.s 43464351, 43464352 Head Office Phone Nos. 22352901, 902 & 903.

# ಕರ್ನಾಟಕ ಶಿಲ್ಪಕಲಾ ಅಕಾಡೆಮಿ ವಾರ್ಷಿಕ ಶಿಲ್ಪಕಲಾ ಪ್ರದರ್ಶನ-2016
# 7 ಶಿಲ್ಪಿಗಳ ಕೃತಿಗೆ ಬಹುಮಾನ

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಾರ್ಷಿಕ ಶಿಲ್ಪಕಲಾ ಪ್ರದರ್ಶನ-2016 ಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಬಂದಂತಹ ಸಾಂಪ್ರದಾಯಿಕ ಮತ್ತು ಸಮಕಾಲೀನ, ಜಾನಪದ ಶೈಲಿಯ 93 ಶಿಲ್ಪಕಲಾಕೃತಿಗಳಲ್ಲಿ 7 ಶಿಲ್ಪಕಲಾಕೃತಿಗಳಿಗೆ ಬಹುಮಾನ ಪ್ರಕಟಿಸಲಾಗಿದೆ.

ಬಹುಮಾನ ವಿಜೇತರ ವಿವರ ಹೀಗಿದೆ: ಮಂಡ್ಯ ಜಿಲ್ಲೆಯ ಭರತ್ ಎಂ.ಸಿ. (ಸಂಪ್ರದಾಯ ಶಿಲ್ಪ, ಶೀರ್ಷಿಕೆ- ವಿಷ್ಣು, ಮಾಧ್ಯಮ- ಕಲ್ಲು), ಉಡುಪಿ ಜಿಲ್ಲೆಯ ನಿತ್ಯಾನಂದ ಆಚಾರ್ಯ

(ಸಂಪ್ರದಾಯ ಶಿಲ್ಪ, ಶೀರ್ಷಿಕೆ– ದರ್ಪಣ ಸುಂದರಿ, ಮಾಧ್ಯಮ– ಕಲ್ಲು), ಕಲಬುರಗಿ ಜಿಲ್ಲೆಯ ಜಕಣಾಚಾರ್ಯ (ಸಂಪ್ರದಾಯ ಶಿಲ್ಪ, ಶೀರ್ಷಿಕೆ– ವಾರಿಯರ್ ವಿತ್ ಹಾರ್ಸ್, ಮಾಧ್ಯಮ– ಮರ) ಕೊಪ್ಪಳ ಜಿಲ್ಲೆಯ ಮಂಜುನಾಥ ಈ ಚಿತ್ರಗಾರ, (ಕಿನ್ನಾಳ ಕಲೆ, ಶೀರ್ಷಿಕೆ– ಹನುಮಂತ, ಮಾಧ್ಯಮ– ಮಿಶ್ರ ಮಾಧ್ಯಮ), ದಾವಣಗೆರೆ ಜಿಲ್ಲೆಯ ಈಶ್ವರ್ ಪಿ. (ಸಮಕಾಲೀನ ಶಿಲ್ಪ, ಶೀರ್ಷಿಕೆ– ವಿಶ್ರಾಂತಿ, ಮಾಧ್ಯಮ– ಕಬ್ಬಿಣ) ಇವರಿಗೆ ತಲಾ 25 ಸಾವಿರ ರೂ. ಗಳ ನಗದು ಬಹುಮಾನ ನೀಡಿ ಗೌರವಿಸಲಾಗುವುದು. ಬಾಗಲಕೋಟೆ ಜಿಲ್ಲೆಯ ಶಿವಾನಂದ ಬಡಿಗೇರ (ಸಂಪ್ರದಾಯ ಶಿಲ್ಪ, ಶೀರ್ಷಿಕೆ– ನಟರಾಜ, ಮಾಧ್ಯಮ– ಕಲ್ಲು) ಇವರ ಶಿಲ್ಪಕೃತಿಯು ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಮೈಸೂರು ಇವರ ಬಹುಮಾನಕ್ಕೆ ಆಯ್ಕೆಯಾಗಿದೆ. ದಾವಣಗೆರೆಯಲ್ಲಿ ಡಿಸೆಂಬರ್ ತಿಂಗಳಲ್ಲಿ ಬಹುಮಾನ ವಿತರಣಾ ಸಮಾರಂಭ ಏರ್ಪಡಿಸಲಾಗುವುದು ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

## ಶಿಲ್ಪಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪ್ರಕಟ

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಸರ್ವ ಸದಸ್ಯರ ಸಭೆಯಲ್ಲಿ ಐದು ಮಂದಿ ಶಿಲ್ಪಿಗಳನ್ನು 2016 ನೇಸಾಲಿನ ಗೌರವ ಪ್ರಶಸ್ತಿಗೆ ಸರ್ವಾನುಮತದಿಂದ ಆಯ್ಕೆ ಮಾಡಿದೆ

ಶಿವಮೊಗ್ಗ ಜಿಲ್ಲೆಯ ಕೆ. ನಾರಾಯಣ ರಾವ್ (ಸಂಪ್ರದಾಯ ಶಿಲ್ಪ), ರಾಯಚೂರು ಜಿಲ್ಲೆಯ ಮಾನ್ಯ್ಯ ಬಡಿಗೇರ (ರಥ ಶಿಲ್ಪ), ಕೋಲಾರ ಜಿಲ್ಲೆಯ ಎಸ್. ಮಂಜುನಾಥ ಆಚಾರ್ಯ (ಸಂಪ್ರದಾಯ ಶಿಲ್ಪ), ಬೆಂಗಳೂರು ಗ್ರಾಮಾಂತ್ರ ಜಿಲ್ಲೆಯ ಎಂ. ವೆಂಕಟೇಶ್ (ಸಮಕಾಲೀನ ಶಿಲ್ಪ) ಹಾಗೂ ಕಲಬುರಗಿ ಜಿಲ್ಲೆಯ ಶೋಭಾ ಈ. ಕಂಬಾರ (ಸಂಪ್ರದಾಯ ಶಿಲ್ಪ) ಅವರುಗಳು ಈ ಕಲಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಪುರಸ್ಕೃತರಿಗೆ ತಲಾ ರೂ. 50,000/–ನಗದು ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಡಿಸೆಂಬರ್ ಮಾಹೆಯಲ್ಲಿ ದಾವಣಗೆರೆಯಲ್ಲಿ ಏರ್ಪಡಿಸಲಾಗುವುದು. ಸಮಾರಂಭದ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಂಎಸ್:ಜಿಪಿಆರ್.

## ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಪ್ರವಾಸ

ಬೆಂಗಳೂರು, ಅಕ್ಟೋಬರ್ 22 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯು ಅಕ್ಟೋಬರ್ 25 ರಿಂದ 27 ಪ್ರವಾಸ ಕೈಗೊಳ್ಳಲಿದೆ.

ಸಮಿತಿಯು ಅಕ್ಟೋಬರ್ 26 ರಂದು ಕೊಡಗು ಜಿಲ್ಲೆಯ (ಮಡಿಕೇರಿ) ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಭೆ ಸೇರಿ, ಕೊಡಗು ಜಿಲ್ಲೆಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಜನಾಂಗದವರ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಿದೆ.

ಅಕ್ಟೋಬರ್ 27 ರ ಗುರುವಾರದಂದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಮುದಾಯದವರ ವಿದ್ಯಾರ್ಥಿ ವಸತಿ ನಿಲಯಗಳಿಗೆ ಹಾಗೂ ಸಮುದಾಯ ಭವನ/ಶಾದಿ ಮಹಲ್‌ಗಳೀಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಲಿದೆ ಎಂದು ವಿಧಾನಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಎಂಎಸ್:ಜಿಪಿಆರ್.